ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ರಾಜ್ಯ ಸಚಿವರು) :

ಅ) ಇದೆ.

ಆ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿ ಇರುತ್ತದೆ.

ಗದಗ್ ಬೆಟಗೇರಿ ನಗರಸಭೆ ಐ.ಡಿ.ಎಸ್.ಎಂ.ಟಿ.ಯಿಂದ ಹಣಕಾಸು ಸಹಾಯ

545 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಗದಗ ಬೆಟಗೇರಿ ನಗರಸಭೆ ಐ ಡಿ ಎಸ್ ಎಂ ಟಿ ಯಿಂದ ಹಣಕಾಸು ಸಹಾಯ ಮಾಡುವ ಯೋಜನೆ ಎಂದು ಮಂಜೂರಾಯ್ತು?

2) ಈವರೆವಿಗೆ ಐಡಿಎಸ್ ಎಂಟಿ ಯೋಜನೆಯಡಿಯಲ್ಲಿ ಕೇಂದ್ರ ಹಾಗೂ ರಾಜ್ಯಸರ್ಕಾರಗಳಿಂದ ಬಿಡುಗಡೆಯಾದ ಹಣವೆಷ್ಟು?

3) ಈ ಬಿಡುಗಡೆಯಾದ ಹಣದಲ್ಲಿ ಗದಗ-ಬೆಟಗೇರಿ ನಗರಸಭೆ ಮಾಡಿದ ವೆಚ್ಚ ಎಷ್ಟು?

4) ಈ ಯೋಜನೆಯಡಿಯಲ್ಲಿ ಸಿಗುವ ಪೂರ್ತಿ ಹಣ ಬಳಸಿಕೊಳ್ಳುವ ಅವಧಿ ಎಷ್ಟು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

1) 1994-95ನೇ ಸಾಲಿನಲ್ಲಿ

2) ಕೇಂದ್ರ ಸರ್ಕಾರದಿಂದ - 55.00 ಲಕ್ಷ ರೂ.
ರಾಜ್ಯ ಸರ್ಕಾರದಿಂದ - 36.67 ಲಕ್ಷ ರೂ.

3) ಖರ್ಚು ಮಾಡಿಲ್ಲ.

4) ಐದು ವರ್ಷಗಳು.

ರೋಣ ತಾಲ್ಲೂಕಿನ ಗಜೇಂದ್ರಗಡ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ

547 - ಶ್ರೀ ಶೈಲಪ್ಪ ಬಿದರೂರು (ರೋಣ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೋಣ ತಾಲ್ಲೂಕಿನ ಗಜೇಂದ್ರಗಡ ನಗರದಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಶಾಶ್ವತವಾದ ನೀರು ಪೂರೈಕೆ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ?

ಇ) ಹಾಗಿದ್ದಲ್ಲಿ ಈ ಯೋಜನೆ ಕಾಮಗಾರಿ 1996-97 ರಲ್ಲಿ ಕೈಗೆತ್ತಿಕೊಳ್ಳಲಾಗುವುದೇ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) ಸರ್ಕಾರವು 34.50 ಲಕ್ಷರೂ.ಗಳಿಗೆ ಕೊಳವೆ ಬಾವಿಗಳನ್ನು ಮೂಲವಾಗಿಟ್ಟುಕೊಂಡು ಕುಡಿಯುವ ನೀರಿನ ಯೋಜನೆಯನ್ನು ಸರ್ಕಾರಿ ಆದೇಶ ಸಂ:ವನಇ 37 ಯುಡಬ್ಲ್ಯೂಎಸ್ 92, ದಿ: 25-11-1995 ಅನುಮೋದನೆ ನೀಡಿದೆ.

ಇ) ಕೊಳವೆ ಬಾವಿ ಮೂಲದ, 34.50 ಲಕ್ಷರೂ. ಮೊತ್ತದ ಅಂದಾಜಿಗೆ ಸರ್ಕಾರ 25.11.1995ರ ಆದೇಶದಲ್ಲಿ ಅನುಮೋದನೆ ನೀಡಿದೆ. ಆರ್ಥಿಕ ಮಾದರಿ ನಿರ್ಧಾರವಾದ ನಂತರ ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡುತ್ತದೆ.

ಹಾಸನದ ಕೈಗಾರಿಗಾ ಬೆಳವಣಿಗೆ ಕೇಂದ್ರ ಅಂದಾಜು ಮಾಡಿರುವ ಪ್ರದೇಶ

548 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಕೈಗಾರಿಕಾ ಬೆಳವಣಿಗೆ ಕೇಂದ್ರಕ್ಕೆ ಅಂದಾಜು ಮಾಡಿರುವ ಪ್ರದೇಶವೆಷ್ಟು, ಈಗ ಪಡೆದಿರುವ ಭೂಮಿ ಎಷ್ಟು, ಉಳಿದಿರುವ ಪ್ರದೇಶವು ಯಾವಾಗ, ಸರ್ಕಾರಿ ಭೂಮಿ ಎಷ್ಟು, ಮತ್ತು ಖಾಸಗಿ ಭೂಮಿಯೆಷ್ಟು

ಆ) ನೀರು, ವಿದ್ಯುಚ್ಛಕ್ತಿ ಇತರೆ ಅಭಿವೃದ್ಧಿಗೆ ಈಗ ಖರ್ಚು ಮಾಡಿರುವ ಹಣವೆಷ್ಟು, ಗುರಿಯೆಷ್ಟು, ಪ್ರಗತಿ ಯಾವ ಹಂತದಲ್ಲಿದೆ, ಪೂರ್ಣ ಮುಗಿಸುವ ಗುರಿ ಯಾವಾಗ.

ಇ) ಆ ಪ್ರದೇಶದಲ್ಲಿ ಕೈಗಾರಿಕೆಯನ್ನು ಪ್ರಾರಂಭಿಸಲು ಯಾರಾದರೂ ಮುಂದೆ ಬಂದಿದ್ದಾರೆಯೇ ಬಂದಿದ್ದರೆ, ಯಾವ ಹಂತದ ಪರಿಶೀಲನೆಯಲ್ಲಿದೆ?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಸುಮಾರು 2000 : ಎಕರೆಗಳು, (1764.12 ಎಕರೆಗೆ ಅಂತಿಮ ಅಧಿಸೂಚನೆ ಹೊರಡಿಸಿದೆ)

1181.38 ಎಕರೆ ಸಧ್ಯದಲ್ಲಿಯೇ ಸ್ವಾಧೀನ ಪಡೆಯಲಾಗುವುದು.

223.23 ಎಕರೆ

1764.12 ಎಕರೆಗಳು

1535.29 ಎಕರೆ

ಆ) ಹಾಸನ ಬೆಳವಣಿಗೆ ಕೇಂದ್ರ